**ಕೆ.ಪಿ.ಸಿ. ಬ್ಯಾಂಕ್ ಕೆ.ಎಂ.ಎಫ್ ಸ್ಥಾಪನೆಗಳ ಬಗ್ಗೆ**

**1826(1416); ಶ್ರೀ ಬಸವರಾಜ ಎಸ್. ಬೊಮ್ಮಾಯಿ**

ಅ) ನೂತನವಾಗಿ ರಚನೆಯಾದ ಜಿಲ್ಲಾ ಕೇಂದ್ರಗಳಲ್ಲಿ ಸ್ವತಂತ್ರವಾಗಿ ಕೆ.ಪಿ.ಸಿ. ಬ್ಯಾಂಕ್ ಮತ್ತು ಹಾಲು ಉತ್ಪಾದಕರ ಒಕ್ಕೂಟ (ಕೆಎಂಎಫ್) ಸ್ಥಾಪನೆಯನ್ನು ಮಾಡುವ ಇರಾದೆ ಸರ್ಕಾರಕ್ಕೆ ಇದೆಯೇ?

ಆ) ಇದ್ದಲ್ಲಿ, ತೆಗೆದುಕೊಂಡ ಕ್ರಮಗಳೇನು? ಹಾಗೂ ಹೊಸದಾಗಿ ರಚನೆಗಳಾಗಿರುವ ಜಿಲ್ಲಾ ಸಹಕಾರಿ ಬ್ಯಾಂಕುಗಳು ಎಷ್ಟು?

ಇ) ಪ್ರಗತಿಯ ವಿವರಗಳನ್ನು ಒದಗಿಸುವುದು?

**ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್ (ಮಾನ್ಯ ಸಹಕಾರ ಸಚಿವರು)**

ಅ) **'ಡಿ.ಸಿ.ಸಿ. ಬ್ಯಾಂಕುಗಳ ಬಗ್ಗೆ'**

ನೂತನ ಜಿಲ್ಲೆಗಳಾದ ಉಡುಪಿ, ಹಾವೇರಿ ಮತ್ತು ಚಾಮರಾಜನಗರ ಜಿಲ್ಲೆಗಳಲ್ಲಿ ಪ್ರತ್ಯೇಕ ಜಿಲ್ಲಾ ಕೇಂದ್ರ ಬ್ಯಾಂಕುಗಳನ್ನು ಸ್ಥಾಪಿಸುವ ಬಗ್ಗೆ ಪ್ರಸ್ತಾವನೆಗಳು ಬಂದಿದ್ದು ಈ ಬಗ್ಗೆ ಸರ್ಕಾರದ ಪರಿಶೀಲನೆಯಲ್ಲಿರುತ್ತದೆ.

**'ಹಾಲು ಒಕ್ಕೂಟಗಳ ಬಗ್ಗೆ'**

ಹೊಸದಾಗಿ ರಚಿತವಾದ ಜಿಲ್ಲಾ ಕೇಂದ್ರಗಳಲ್ಲಿ ಜಿಲ್ಲೆಗೆ ಪ್ರತ್ಯೇಕವಾದ ಹಾಲು ಉತ್ಪಾದಕರ ಒಕ್ಕೂಟಗಳನ್ನು ದಾವಣಗೆರೆ ಮತ್ತು ಚಾಮರಾಜನಗರ ಜಿಲ್ಲೆಗಳಲ್ಲಿ ಪ್ರಾರಂಭಿಸಲು ಪ್ರಸ್ತಾವನೆಗಳು ಬಂದಿದ್ದು, ಇವು ಸರ್ಕಾರದ ಪರಿಶೀಲನೆಯಲ್ಲಿ ಇರುತ್ತವೆ.

ಚಿಕ್ಕಮಗಳೂರು ಹಾಗೂ ಹಾವೇರಿ ಜಿಲ್ಲೆಗೆ ಪ್ರತ್ಯೇಕ ಹಾಲು ಒಕ್ಕೂಟ ಸ್ಥಾಪಿಸಲು ಮನವಿಗಳು ಬಂದಿದ್ದು, ಈ ಮನವಿಗಳ ಕುರಿತಂತೆ ಒಕ್ಕೂಟ ಸ್ಥಾಪನೆಯ ಕಾರ್ಯ ಸಾಧ್ಯತೆಯ (viability) ಬಗ್ಗೆ ಪರಿಶೀಲನೆ ಹಂತದಲ್ಲಿದೆ.

ಆ) 'ಡಿ.ಸಿ.ಸಿ. ಬ್ಯಾಂಕುಗಳ ಬಗ್ಗೆ'

- ಹೊಸದಾಗಿ ರಚಿತವಾದ ಜಿಲ್ಲಾ ಕೇಂದ್ರಗಳಲ್ಲಿ ಜಿಲ್ಲೆಗೆ ಪ್ರತ್ಯೇಕವಾದ ಜಿಲ್ಲಾ ಕೇಂದ್ರ ಬ್ಯಾಂಕಗಳನ್ನು ಬಾಗಲಕೋಟೆ ಮತ್ತು ದಾವಣಗೆರೆ ಜಿಲ್ಲೆಗಳಲ್ಲಿ ಈಗಾಗಲೇ ಸ್ಥಾಪಿಸಲಾಗಿದೆ.

- ಉಡುಪಿ ಜಿಲ್ಲೆಯಲ್ಲಿ, ಜಿಲ್ಲಾ ಕೇಂದ್ರ ಬ್ಯಾಂಕ್ ಸ್ಥಾಪಿಸುವ ಬಗ್ಗೆ ಗೌ॥ ಭಾರತದ ಸರ್ವೋಚ್ಚ ನ್ಯಾಯಾಲಯದಲ್ಲಿ ಎಸ್.ಎಲ್.ಪಿ ನಂ. 9168, 10113 ಮತ್ತು 10397/2012, ದಾಖಲಾಗಿದ್ದು, ಉಡುಪಿ ಜಿಲ್ಲಾ ಡಿ.ಸಿ.ಸಿ. ಬ್ಯಾಂಕ ಸ್ಥಾಪನೆ ಮಾಡುವ ಬಗ್ಗೆ ಯಥಾ ಸ್ಥಿತಿ ಕಾಪಾಡಿಕೊಳ್ಳಲು ದಿನಾಂಕ: 30-03-2012 ರಂದು ಮಾನ್ಯ ನ್ಯಾಯಾಲಯವು ಆದೇಶಿಸಿರುತ್ತದೆ.

- ಹಾವೇರಿ ಜಿಲ್ಲೆಯಲ್ಲಿ ಹೊಸದಾಗಿ ಜಿಲ್ಲಾ ಬ್ಯಾಂಕನ್ನು ಸ್ಥಾಪಿಸಲು ಪ್ರಸ್ತಾವನೆಯು ಬಂದಿದ್ದು, ಈ ಬಗ್ಗೆ ಆರ್ಥಿಕ ಸಬಲತೆ ವರದಿಯನ್ನು ಪಡೆಯಲಾಗಿದ್ದು. ಕೆ.ಸಿ.ಸಿ ಬ್ಯಾಂಕನ್ನು ವಿಭಜಿಸಿ ಪ್ರತ್ಯೇಕ ಜಿಲ್ಲಾ ಕೇಂದ್ರ ಬ್ಯಾಂಕನ್ನು ಸ್ಥಾಪಿಸುವುದು ಸೂಕ್ತವಲ್ಲವೆಂದು ವರದಿ ಬಂದಿರುತ್ತದೆ. ಹಾವೇರಿಯಲ್ಲಿ ಜಿಲ್ಲಾ ಕೇಂದ್ರ ಬ್ಯಾಂಕನ್ನು ಸ್ಥಾಪಿಸುವ ಬಗ್ಗೆ ತಜ್ಞರ ವರದಿಯನ್ನು ಪುನಃ ಪಡೆದು ಅದರಂತೆ ಸೂಕ್ತ ಕ್ರಮವಿಡಲಾಗುವದು.

- ಚಾಮರಾಜನಗರ ಜಿಲ್ಲೆಯಲ್ಲಿ ಪ್ರತ್ಯೇಕವಾಗಿ ಜಿಲ್ಲಾ ಕೇಂದ್ರ ಬ್ಯಾಂಕ್ ಸ್ಥಾಪಿಸುವ ಬಗ್ಗೆ ಆರ್ಥಿಕ ಸಬಲತೆ ಬಗ್ಗೆ ವರದಿ ಬಂದಿದ್ದು, ಈ ಬಗ್ಗೆ ಸರ್ಕಾರದ ಪರಿಶೀಲನೆಯಲ್ಲಿರುತ್ತದೆ.

ಇ) 'ಡಿ.ಸಿ.ಸಿ. ಬ್ಯಾಂಕುಗಳ ಬಗ್ಗೆ'

ಮೈಸೂರು-ಚಾಮರಾಜನಗರ ಡಿ.ಸಿ.ಸಿ. ಬ್ಯಾಂಕ್ ವಿಭಜನೆ ಬಗ್ಗೆ ತಜ್ಞರ ವರದಿಯನ್ನು ಆಧರಿಸಿ ಕ್ರಮವಿಡಲು ಮೈಸೂರು-ಚಾಮರಾಜನಗರ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕಿಗೆ ಸೂಚಿಸಲಾಗಿರುತ್ತದೆ.

**'ಹಾಲು ಒಕ್ಕೂಟಗಳ ಬಗ್ಗೆ'**

**ಚಾಮರಾಜನಗರ ಹಾಲು ಒಕ್ಕೂಟ ರಚನೆ ಬಗ್ಗೆ:–**

- ಚಾಮರಾಜನಗರ ಜಿಲ್ಲೆಯಿಂದ ದಿನವಹಿ ಸರಾಸರಿ 2.85 ಲಕ್ಷ ಕೆ.ಜಿ. ಹಾಲು ಸಂಗ್ರಹಣೆಯಾಗುತ್ತಿದೆ.

- ಚಾಮರಾಜನಗರ ಜಿಲ್ಲಾ ಹಾಲು ಒಕ್ಕೂಟದ ರಚನೆಗೆ ಸಂಬಂಧಿಸಿದಂತೆ, ಈಗಾಗಲೇ ಒಕ್ಕೂಟದ ಆಡಳಿತ ಮಂಡಳಿ ಸಭೆ ಹಾಗೂ ವಾರ್ಷಿಕ ಸರ್ವ ಸದಸ್ಯರ ಸಭೆಗಳಲ್ಲಿ ನಿರ್ಣಯಿಸಲಾಗಿದ್ದು, ಆಸ್ತಿ–ಜವಾಬ್ದಾರಿ ಹಾಗೂ ಮಾರುಕಟ್ಟೆಯನ್ನು ಶೇ. 60:40 ರ ಅನುಪಾತದಲ್ಲಿ ಹಂಚಿಕೆ ಮಾಡಿಕೊಳ್ಳಲು ತೀರ್ಮಾನವಾಗಿರುತ್ತದೆ.

- ಚಾಮರಾಜನಗರ ಜಿಲ್ಲೆಯಲ್ಲಿ ಪ್ರತ್ಯೇಕ ಒಕ್ಕೂಟ ಸ್ಥಾಪನೆಗೆ ಸರ್ಕಾರವು 2014–15 ರ ಆಯವ್ಯಯದಲ್ಲಿ ₹ 83 ಕೋಟಿಗಳ ಅನುದಾನವನ್ನು ಕಾಯ್ದಿರಿಸಲಾಗಿದೆ.

- ಚಾಮರಾಜನಗರ ಜಿಲ್ಲೆ ಸಂತೇಮಾರೇಹಳ್ಳಿ ಹೋಬಳಿಯ ಕುದೇರು ಗ್ರಾಮದ ರೇಷ್ಮೆ ಇಲಾಖೆಗೆ ಸೇರಿದ 23.14 ಎಕರೆ ಜಮೀನನ್ನು ಕರ್ನಾಟಕ ಭೂ ಮಂಜೂರಾತಿ ನಿಯಮಗಳಡಿಯಲ್ಲಿ ನಿಯಮ 20(1) (ಠಿ) ರಂತೆ ಮಾರುಕಟ್ಟೆ ಬೆಲೆಯ ಶೇ.50 ರಷ್ಟು ಮೊತ್ತಕ್ಕೆ ಮೈಸೂರು–ಚಾಮರಾಜನಗರ ಜಿಲ್ಲಾ ಹಾಲು ಒಕ್ಕೂಟಕ್ಕೆ ವರ್ಗಾವಣೆ ಮಾಡಲು ಸರ್ಕಾರವು ಆದೇಶಿಸಿರುತ್ತದೆ.

**ದಾವಣಗೆರೆ ಹಾಲು ಒಕ್ಕೂಟ ರಚನೆ ಬಗ್ಗೆ:–**

- ದಾವಣಗೆರೆ–ಚಿತ್ರದುರ್ಗ ಜಿಲ್ಲೆಗಳಿಂದ ದಿನವಹಿ ಸರಾಸರಿ 1.98 ಲಕ್ಷ ಕೆ.ಜಿ. ಹಾಲು ಸಂಗ್ರಹಣೆಯಾಗುತ್ತಿದೆ.

- ಶಿವಮೊಗ್ಗ, ದಾವಣಗೆರೆ ಮತ್ತು ಚಿತ್ರದುರ್ಗ ಜಿಲ್ಲಾ ಹಾಲು ಒಕ್ಕೂಟದ ವ್ಯಾಪ್ತಿಯಿಂದ ದಾವಣಗೆರೆ ಮತ್ತು ಚಿತ್ರದುರ್ಗ ಜಿಲ್ಲೆಗಳನ್ನು ಬೇರ್ಪಡಿಸಿ ದಾವಣಗೆರೆ ಚಿತ್ರದುರ್ಗ ಜಿಲ್ಲೆಗಳನ್ನೊಳಗೊಂಡ ನೂತನ ಜಿಲ್ಲಾ ಹಾಲು ಒಕ್ಕೂಟ ಸ್ಥಾಪಿಸಲು ಶಿವಮೊಗ್ಗ ಒಕ್ಕೂಟದ 2012–13 ನೇ ಸಾಲಿನ ಸರ್ವ ಸದಸ್ಯರ ಸಭೆಯಲ್ಲಿ ಸರ್ಕಾರದ ವತಿಯಿಂದ ₹ 80 ಕೋಟಿ ಅನುದಾನದ ವೆಚ್ಚವನ್ನು ಪಡೆಯುವ ನಿಬಂಧನೆಗೊಳಪಟ್ಟು ಒಕ್ಕೂಟ ವಿಭಜಿಸಲು ತೀರ್ಮಾನಿಸಲಾಗಿರುತ್ತದೆ.

- ಪ್ರಸ್ತಾಪಿತ ನೂತನ ದಾವಣಗೆರೆ–ಚಿತ್ರದುರ್ಗ ಜಿಲ್ಲಾ ಹಾಲು ಒಕ್ಕೂಟದ ರಚನೆಗೆ ಸಂಬಂಧಿಸಿದಂತೆ ಎನ್‌ಡಿಡಿಬಿಯ ನಿವೃತ್ತ ಅಧಿಕಾರಿಗಳಿಂದ Feasibility report ವರದಿ ಪಡೆಯಲಾಗಿದೆ.

- ಒಕ್ಕೂಟಗಳ ಆಸ್ತಿ ಜವಾಬ್ದಾರಿ ಹಂಚಿಕೆ ಬಗ್ಗೆ ಒಕ್ಕೂಟಗಳು ಶೇ.50:50 ರ ಅನುಪಾತದಲ್ಲಿ ಹಂಚಿಕೆ ಮಾಡಿಕೊಳ್ಳಲು ಹಾಗೂ 2 ಒಕ್ಕೂಟಗಳಿಗೆ ಪ್ರತ್ಯೇಕವಾದ ಬೈಲಾಗಳನ್ನು ರಚಿಸಿಕೊಳ್ಳಲು ವಿಶೇಷ ಸರ್ವಸದಸ್ಯರ ಸಭೆ ಕರೆದು, ಅನುಮೋದನೆ ಪಡೆದು ವಿಭಜನೆಯ ಪ್ರಸ್ತಾವೆಯನ್ನು ಸಹಕಾರ ಸಂಘಗಳ ನಿಬಂಧಕರಿಗೆ ಸಲ್ಲಿಸಲು ಶಿವಮೊಗ್ಗ ಹಾಲು ಒಕ್ಕೂಟದ ಸರ್ವ ಸದಸ್ಯರ ಸಭೆಯಲ್ಲಿ ತೀರ್ಮಾನವಾಗಿದ್ದು ಅದರಂತೆ ಮುಂದಿನ ಅವಶ್ಯ ಕ್ರಮ ಕೈಗೊಳ್ಳಲಾಗುವದು.